**ಅಸಲು ದಾವ ಸಂಖ್ಯೆಃ 459/2014**

**ಡಿ.ಡಬ್ಲೂ -1**

**ದಿಃ 11-06-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ವಾದಿಪರ ವಕೀಲರಾದ ಶ್ರೀ AJK ರವರಿಂದಃ-**

1. ನಾನು ನ್ಯಾಷನಲ್ ಇನ್ಸೂರೆನ್ಸ ಕಂಪನಿಯಲ್ಲಿ ಸೀನಿಯರ ಡಿವಿಜನಲ ಮ್ಯಾನೇಜರ ಆಗಿ ನಿವೃತ್ತಿ ಹೊಂದಿರುತ್ತೇನೆ. ನಾನು ನಿವೃತ್ತಿ ಹೊಂದಿ ಸುಮಾರು 20 ವರ್ಷಗಳಾಗಿವೆ. ದಾವಾ ಸ್ವತ್ತಾದ ಆರ್ ಎಸ್ ನಂಬರ 397/1 ರಲ್ಲಿ 1 ಎಕರೆ 8 ಗುಂಟೆ ಜಮೀನು ನನ್ನ ಮಾಲೀಕತ್ವದ ಜಮೀನು ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಹೆಂಡತಿ, 3 ಮತ್ತು 4ನೇ ಪ್ರತಿವಾದಿ ನನ್ನ ಸಹೋದರರು, 5 ರಿಂದ 8ನೇ ಪ್ರತಿವಾದಿಯರು ನನ್ನಿಂದ ದಾವಾ ಸ್ವತ್ತನ್ನು ಖರೀದಿಗೆ ಪಡೆದವರು. ದಾವಾ ಸ್ವತ್ತನ್ನು ಜನೇವರಿ 1994 ರಲ್ಲಿ ನಾನು 5 ರಿಂದ 8ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತೇನೆ. ನಾನು ಅವರಿಗೆ ಖರೀದಿಗೆ ಕೊಟ್ಟಾಗ ನಾನು ಪಡೆದ ಕ್ರಯದ ಪ್ರತಿಫಲ ರೂ.1,28,000/- ಆಗಿರಬಹುದು. ನಾನು ಅವರಿಗೆ ಖರೀದಿಗೆ ಕೊಟ್ಟಾಗ ದಾವಾ ಸ್ವತ್ತು ವ್ಯವಸಾಯಿಕ ಜಮೀನೇ ಆಗಿತ್ತು.

2. ನನಗೆ ವಾದಿಯ ಪರಿಚಯ ಇರುತ್ತದೆ. ನಾನು ವಾದಿಯನ್ನು 1984 ರಿಂದ ಸುಮಾರು 5-6 ಬಾರಿ ಭೇಟಿಯಾಗಿರಬಹುದು. ವಾದಿಯ ಸೊಸೈಟಿಯಾದ ಶ್ರೀ ರಾಘವೇಂದ್ರ ಕೋ ಆಪರೇಟಿವ ಹೌಸಿಂಗ ಸೊಸೈಟಿಯಿಂದ ಪ್ಲಾಟ್ ಪಡೆಯುವ ಉದ್ದೇಶದಿಂದ ಅವರನ್ನು ಭೇಟಿ ಆಗಿದ್ದೆ. ನಂತರ ನಾನು ಸದರಿ ಸೊಸೈಟಿಯಿಂದ ಒಂದು ಪ್ಲಾಟನ್ನು ವಿನಾಯಕ ನಗರದಲ್ಲಿ ಖರೀದಿಸಿರುತ್ತೇನೆ. 1984 ರಲ್ಲಿಯೇ ಸದರಿ ಪ್ಲಾಟನ್ನು ಖರೀದಿಸಿರುತ್ತೇನೆ. ನಾನು ಈಗ ಕಾಮತ ಗಲ್ಲಿಯಲ್ಲಿ ವಾಸವಿರುತ್ತೇನೆ. ಸದರಿ ವಿನಾಯಕ ನಗರದ ಪ್ಲಾಟ ಈಗಲೂ ನನ್ನ ಮಾಲೀಕತ್ವದಲ್ಲಿ ಇರುತ್ತದೆ. ಅದರಲ್ಲಿ ಕಟ್ಟಡ ಕಟ್ಟಿಸಿರುತ್ತೇನೆ.

3. ಸರ್ವೆ ನಂಬರ 397/1 ರ ಜಮೀನು ಹಳೆಯ ಪೂಣಾ- ಬೆಂಗಳೂರು ರಸ್ತೆಯಲ್ಲಿ ಇರುತ್ತದೆ. ಸದರಿ ಆಸ್ತಿಯನ್ನು ನಾನು ಮಾರಾಟಕ್ಕೆ ತೆಗೆದಿದ್ದೆ ಎಂದರೆ ಸಾಕ್ಷಿ ಹೌದು ಆ ಸಮಯದಲ್ಲಿ ವಾದಿ ಅದರ ಕುರಿತು ಮಾತನಾಡಿದ್ದರು ಹಾಗೂ ವಾದಿಯು ಸದರಿ ಆಸ್ತಿಯನ್ನು ರಾಘವೇಂದ್ರ ಕೋ ಆಪರೇಟಿವ ಸೊಸೈಟಿ ಪರವಾಗಿ ಕೇಳಿದ್ದರು. ಸದರಿ ವಿಚಾರದ ಕುರಿತು 2-3 ಬಾರಿ ನಾನು ವಾದಿ ಹಾಗೂ ಓರ್ವ ಸೋಮನಾಚೆ ರವರೊಂದಿಗೆ ಮಾತನಾಡಿರುತ್ತೇನೆ. ಸದರಿ ಮಾತಕತೆಯಲ್ಲಿ ನಾನು ಕ್ರಯದ ಪ್ರತಿಫಲವನ್ನು ರೂ.51,000/- ಹೇಳಿದ್ದೆ. ವಾದಿಯು ಕ್ರಯದ ಪ್ರತಿಫಲವನ್ನು ರೂ.41,000/- ಕ್ಕೆ ಕೇಳಿದರು. ಸಾಕ್ಷಿಗೆ ನಿಪಿ-2 ಕರಾರು ಪತ್ರವನ್ನು ತೋರಿಸಿ ಅದರ 2ನೇ ಪುಟದಲ್ಲಿ ಕೊನೆಯ ಸಾಲಿನಲ್ಲಿ ಇರುವ ಸಹಿಗಳು ತಮ್ಮದು ಹಾಗೂ ತಮ್ಮ ಸಹೋದರರದ್ದು ಎಂದರೆ ಸಾಕ್ಷಿ ಅದನ್ನು ಒಪ್ಪಿರುವುದಿಲ್ಲ. ಸಾಕ್ಷಿ ಮುಂದುವರೆದು ಸದರಿ ಸಹಿಗಳು ವಾದಿಯ ಪ್ರಕಾರ ತನ್ನ ಸಹೋದರರದ್ದು ಆದರೆ ಅವು ತನ್ನ ಸಹೋದರರ ಸಹಿಗಳು ಅಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ಯಾವುದೇ ನೌಕರಿ ಮಾಡುವುದಿಲ್ಲ. 2ನೇ ಪ್ರತಿವಾದಿ ಎಸ್ ಎಸ್ ಎಲ್ ಸಿ ವರೆಗೆ ವಿಧ್ಯಾಭಾಸ ಮಾಡಿರುತ್ತಾರೆ. 2ನೇ ಪ್ರತಿವಾದಿಯು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಾರೆ. ನಿಪಿ-2 ರಲ್ಲಿ 2ನೇ ಪುಟದಲ್ಲಿ ಕಾಣುತ್ತಿರುವ ಕೊನೆಯ ಸಾಲಿನ ಮೊದಲನೇಯ ಸಹಿ 2ನೇ ಪ್ರತಿವಾದಿಯ ಸಹಿ ಆಗಿರುತ್ತದೆ ಎಂದರೆ ಸಾಕ್ಷಿ ಹಾಗೆ ಕಾಣುತ್ತದೆ ಆದರೆ ಅದು 2ನೇ ಪ್ರತಿವಾದಿಯ ಸಹಿ ಅಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯ ಹೆಸರಿನಲ್ಲಿ ಬ್ಯಾಂಕ ಖಾತೆ ಇರುವುದಿಲ್ಲ. ನಿಪಿ-2 ರಲ್ಲಿ 2ನೇ ಪುಟದ ಕೊನೆಯ ಸಾಲಿನಲ್ಲಿ ಕಾಣುತ್ತಿರುವ ಮೊದಲನೇಯ ಸಹಿ 2ನೇ ಪ್ರತಿವಾದಿಯ ಸಹಿ ಆಗಿರುತ್ತದೆ ಹಾಗೂ 2ನೇ ಪ್ರತಿವಾದಿ ಅದೇ ರೀತಿ ತನ್ನ ಎಲ್ಲಾ ಸರ್ಕಾರಿ ದಾಖಲೆಗಳಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2ನೇ ಪ್ರತಿವಾದಿಯ ಸಹಿ ಅದೇ ರೀತಿ ಇರಬಹುದು ಆದರೆ ನಿಪಿ-2 ರಲ್ಲಿ ಇರುವ ಸಹಿ

2ನೇ ಪ್ರತಿವಾದಿಯ ಸಹಿ ಅಲ್ಲ ಎಂದು ನುಡಿಯುತ್ತಾರೆ. ನನ್ನ ಸಹೋದರ ಎಂದರೆ 3ನೇ ಪ್ರತಿವಾದಿಯು ಒಂದು ಖಾಸಗಿ ಕಂಪನಿಯಲ್ಲಿ ಕ್ಲರ್ಕ ಆಗಿ ಕೆಲಸ ಮಾಡುತ್ತಿದ್ದರು. ಅವರು ಬಿ.ಎ ಪದವಿಧರರಾಗಿದ್ದರು. 3ನೇ ಪ್ರತಿವಾದಿಯು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂರದೆ ಸರಿ. ನಿಪಿ-2 ರಲ್ಲಿ 2ನೇ ಪುಟದಲ್ಲಿ ಕೊನೆಯ ಸಾಲಿನಲ್ಲಿ ಕಾಣುತ್ತಿರುವ 2 ನೇ ಸಹಿ 3ನೇ ಪ್ರತಿವಾದಿಯ ಸಹಿ ಎಂದರೆ ಸಾಕ್ಷಿ ತನ್ನ ಮುಂದೆ ಸದರಿ ಸಹಿ ಮಾಡಿದ್ದರೇ ತಾನೇ ಹೇಳಬಲ್ಲೆ, ಆದರೆ ತನಗೆ ಅದರ ಕುರಿತು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿಯು ಅದೇ ರೀತಿ ಸಹಿ ಮಾಡುತ್ತಾರೆ ಎಂದರೆ ಸಾಕ್ಷಿ ಇರಬಹುದು ತಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿಯು ಎಲ್ಲಾ ದಾಖಲೆಗಳಲ್ಲಿ ಎಂದರೆ ಬ್ಯಾಂಕ ಖಾತೆ ದಾಖಲೆಗಳಲ್ಲಿ ಹಾಗೂ ಇತರೆ ಸರ್ಕಾರಿ ದಾಖಲೆಗಳಲ್ಲಿ ನಿಪಿ-2 ರಲ್ಲಿ ಮಾಡಿದಂತೆಯೇ ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

4. ನನ್ನ ಇನ್ನೊಬ್ಬ ಸಹೋದರನಾದ ಸದಾಶಿವ ಮುಂಬೈನಲ್ಲಿ PWD ಯಲ್ಲಿ ಇಂಜಿನಿಯರ ಆಗಿದ್ದರು. ಅವರೂ ಸಹ ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು. ನಿಪಿ-2 ರಲ್ಲಿ 2ನೇ ಪುಟದ ಕೊನೆಯ ಸಾಲಿನ 3ನೇ ಸಹಿ 4ನೇ ಪ್ರತಿವಾದಿ ಸದಾಶಿವ ರವರದ್ದಾಗಿರುತ್ತದೆ ಎಂದರೆ ಸಾಕ್ಷಿಯು ತನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. 4ನೇ ಪ್ರತಿವಾದಿಯ ಬ್ಯಾಂಕ ದಾಖಲೆ ಅಥವಾ ಸರ್ಕಾರಿ ದಾಖಲೆಗಳಲ್ಲಿ ಅವರು ನಿಪಿ-2 ರಲ್ಲಿ ಮಾಡಿದಂತೆಯೇ ಸಹಿ ಮಾಡುತ್ತಾರೆ ಎಂದರೆ ನನಗೆ ಹೇಳಲು ಬರುವುದಿಲ್ಲ. ನಾನು ಹಾಗೂ 2 ರಿಂದ 4ನೇ ಪ್ರತಿವಾದಿಯರು ವಾದಿಯ ಹೆಸರಿಗೆ ದಾವಾ ಸ್ವತ್ತನ್ನು 41,000/-ರೂ.ಗಳಿಗೆ ಮಾರಾಟ ಮಾಡಲು ಒಪ್ಪಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-2 ಕರಾರುಪತ್ರ ತೋರಿಸುತ್ತಿದ್ದು, ಅದರ

ಮೊದಲನೇಯ ಪುಟದಲ್ಲಿ ಮೂರು ಕಡೆಗಳಲ್ಲಿ ಕಾಣುತ್ತಿರುವ ಸಹಿಗಳು ನನ್ನದೇ ಎಂದರೆ ಸಾಕ್ಷಿ ತನ್ನ ಸಹಿಯಂತೆ ಕಾಣುತ್ತದೆ ಆದರೆ ಅವು ತನ್ನ ಸಹಿಗಳಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ತನ್ನ ವಕೀಲರು ಹಾಕಿರುವ ವಕಾಲತ್ತು ತೋರಿಸುತ್ತಿದ್ದು, ಅದರಲ್ಲಿ ತನ್ನ ಸಹಿ ಒಪ್ಪಿ ದ ಕಾರಣ ಸದರಿ ಸಹಿಯನ್ನು ನಿಪಿ-5 ಎಂದು ಗುರುತಿಸಲಾಯಿತು. ನಿಪಿ-5 ಸಹಿ ಹಾಗೂ ನಿಪಿ-2 ರಲ್ಲಿ ಮೊದಲನೇಯ ಪುಟದಲ್ಲಿ ಕಾಣುತ್ತಿರುವ ಸಹಿಗಳು ಒಂದೇ ಇರುತ್ತವೆ ಎಂದರೆ ಸಾಕ್ಷಿ ನಿಪಿ-5 ಮಾತ್ರ ತನ್ನ ಸಹಿ ಮತ್ತು ನಿಪಿ-2 ರಲ್ಲಿ ಕಾಣುತ್ತಿರುವ ಸಹಿ ತಾನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈಗ ಅಸಲು ದಾವ ಸಂಖ್ಯೆ 121/1996 ರಲ್ಲಿ ಸಲ್ಲಿಸಿದ ನನ್ನ ಲಿಖಿತ ಹೇಳಿಕೆಯನ್ನು ನೋಡುತ್ತಿದ್ದು, ಅದರಲ್ಲಿರುವ ನನ್ನ ಸಹಿ ಹಾಗೂ ನಿಪಿ-2 ರಲ್ಲಿ ಇರುವ ಸಹಿಗಳು ನನ್ನದೇ ಎಂದರೆ ಸಾಕ್ಷಿ ಸದರಿ ಲಿಖಿತ ಹೇಳಿಕೆಯಲ್ಲಿ ಇರುವ ಸಹಿ ತನ್ನದು, ಆದರೆ ನಿಪಿ-2 ರಲ್ಲಿ ಇರುವ ಸಹಿ ತನ್ನದಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**